REGARDING KYASANOOR FOREST DISEASE IN SAGAR TALUK

ಕೆರೂರು ಹೋಬಳಿಯ ಮ್ಯಾಲೂರು ಗ್ರಾಮದಲ್ಲಿ ಈವರೆಗೆ 35 ಜನರಿಗೆ ಜ್ವರ ತಗಲಿದ್ದು ಕಂಡುಬಂದಿದೆ. ಅವರ ಪೈಕಿ 7 ಜನರಿಗೆ ಮಾತ್ರ ಕೆ. ಎಫ್. ಡಿ. ಕಾಯಿಲೆ ಎಂಬುದಾಗಿ ಸಂಶಯ ಪಡಲಾಗಿದೆ. ಖಾಯಿಲೆ ತಗುಲಿದ ಜನರು ನಿಟ್ಟೂರು ಆರೋಗ್ಯ ಕೇಂದ್ರಕ್ಕೆ ಉಪಚಾರಕ್ಕಾಗಿ ಹೋಗುತ್ತಾರೆ. ಅತಿ ಹೆಚ್ಚು ಖಾಯಿಲೆಯಿಂದ ಬಳಲುತ್ತಿದ್ದವರನ್ನು ನಿಟ್ಟೂರು ತುಮರಿ ಮತ್ತು ಬೈಕೋಡು ಆರೋಗ್ಯ ಕೇಂದ್ರಗಳಲ್ಲಿ ಸೇರಿಸಲಾಗಿದೆ. ಅವರುಗಳು ಖಾಯಿಲೆಯಿಂದ ಗುಣ ಮುಖರಾಗುತ್ತಿದ್ದಾರೆ. ಆರೋಗ್ಯ ಸಿಬ್ಬಂದಿಯವರು ಸ್ಥಳಕ್ಕೆ ಭೇಟಿ ಕೊಟ್ಟಾಗ ಖಾಯಿಲೆ ಇದ್ದವರಿಗೆ ಸ್ಥಳದಲ್ಲಿಯೇ ಚಿಕಿತ್ಸೆ ಮಾಡಲಾಯಿತು. ತಜ್ಞರ ತಂಡವು ಈ ವಿಷಯದಲ್ಲಿ ಅಧ್ಯಯನ ಮಾಡುತ್ತಿದೆ. ವಿಶೇಷ ಔಷಧಗಳನ್ನು ಪೂರೈಸಲಾಗಿದೆ ಮತ್ತು ಪೂರೈಸಲಾಗುತ್ತಿದೆ. ಈ ಭಾಗದಲ್ಲಿ ಬೇರೆ ಬೇರೆ ಆಸ್ಪತ್ರೆಗಳಲ್ಲಿ 50 ಹಾಸಿಗೆಗಳನ್ನು ಈ ರೋಗಿಗಳಿಗಾಗಿ ಕಾಯ್ದಿರಿಸಲಾಗಿದೆ. ಈ ಮೊದಲು ಪೂರೈಸಲಾದ ಔಷಧಗಳ ಹೊರತಾಗಿ ತಾರೀಖು 25-1-1975ರಂದು ರೂ. 3301-36 ಪೈಸೆ ಔಷಧವನ್ನು ಪೂರೈಸಲಾಗಿದೆ.

ಶ್ರೀ ಕಾಗೋಡ ತಿಮ್ಮಪ್ಪ —ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಚನ್ನಬಸಪ್ಪನವರ ಕಾರ್ಯಕ್ರಮಗಳ ದೆಶೆಯಿಂದ ಆ ನಮ್ಮ ಕೆರೂರು ಈ ದಿವನ ಒಂದು ದ್ವೀಪಾಂತರ ಪ್ರದೇಶವಾಗಿ ಉಳಿದಿದೆ. ಅಲ್ಲಿಗೆ ಸರಾಗವಾಗಿ ಹೋಗುವುದಕ್ಕೆ ರಸ್ತೆ ಸಂಪರ್ಕವಿಲ್ಲ. ಅಲ್ಲೇನು ಈಗ ಎರಡು ಕಡೆ ಆರೋಗ್ಯ ಕೇಂದ್ರಗಳನ್ನು ಮಾಡಿದೆ ಅಲ್ಲಿ ಸಾಕಷ್ಟು ಸ್ಥಳವಿಲ್ಲ. ಅಲ್ಲಿ ಸಾಲದ್ದಕ್ಕೆ ಮಂಗಗಳ ಹಾವಳಿ ಬೇರೆ. ಆದುದರಿಂದ ಇವರನ್ನು ಬೇರೆ ಕಡೆಗೆ ವರ್ಗಾಯಿಸುವುದಕ್ಕೆ ಬದಲು ಅಲ್ಲೇ ಸ್ಥಳದಲ್ಲೇ ಅವರಿಗೆ ಟ್ರೀಟ್‌ಮೆಂಟ್ ಕೊಡುವುದಕ್ಕೆ ಸೂಕ್ತ ವಾರ್ಡಿನ ಸೌಕರ್ಯಗಳನ್ನು ಕಲ್ಪಿಸುವುದಕ್ಕೆ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಾರೆಯೇ ?

ಶ್ರೀ ಹೆಚ್. ಸಿದ್ದವೀರಪ್ಪ :— ಬೇಕಾದಷ್ಟು ಕಟ್ಟಡಗಳಿವೆ ಅಲ್ಲಿ, ಬೇಕಾದರೆ ಸಂಬಂಧಪಟ್ಟ ಎಚ್. ಪಿ. ಸಿ. ಗೆ ಹೇಳುತ್ತೇನೆ. They can afford to give some buildings. Immediately ಬೇಕು ಅನ್ನುವುದಾದರೆ I will request them to keed some buildings at our disposal.

(*iii*) *Re* : acute scarcity of drinking water in Hassan Taluk.

SRI K. H HANUME GOWDA (Hassan) :— I call the attention of the Hon. Minister for Rural Development

and Social Welfare to the acute scarcity of drinking water in Hassan Taluk.

SRI N. RACHAIAH (Minister for Rural Development and Social Welfare) :— I beg to make the following statement.....

The total rainfall from April 1973 to January 1974 in Hassan Taluk was 700.8 mm. The rainfall received from April 1974 to February 1975 is 511.8 mm.

74 villages have been identified as scarcity villages in Hassan taluk, But due to insufficient rainfall during 74-75, 209 villages out of the total of 365 are affected.

Under the normal programme the number of open drinking water wells completed so far in Hassan Taluk during 74-75 is 15. It is further programmed to complete another 5 wells before the end of March 1975.

Similarly, 58 bore wells have been sunk so ar in Hassan Taluk of which 34 bore wells are successful and hand pumps have been fixed to all the 34 successful bore wells The programme of covering 74 additional villages under the bore wells programme before the end of March 1975 is contemplated at a cost of 4.2 lakhs.

Coming to the special measures taken to meet the present situation, it may be mentioned that a programme has been chalked out to take up deepening of the existing drinking water wells right from July 1974 and to sink bore wells. In 42 villages, the existing wells have been deepened. In 21 villages, the works are in progress. In 43 more villages action has been initiated to take up deepening of existing drinking water wells. In 103 villages a programme has been chalked out for providing bore wells out of which 21 wells are actually completed.

The Hobli-wise details in respect of wells already deepened, deepening of wells which are under progress,

(Sri *N.* Rachaiah)

deepening of drinking water wells proposed and bore wells proposed to be sunk are indicated below:

Hobli	Wells already deepened	Deepening under progress	Deepening proposed	Bore wells proposed
(1) Kasaba	12	10	—	13
(2) Kattaya	16	7	15	21
(3) Dudda	3	2	14	27
(4) Shantigrama	11	—	11	34
(5) Saligame	—	2	3	8
Total :	42	21	43	103

There are 5 Low Speed Rigs and One High Speed Rig working in Hassan District. The High speed *Rig* is working in Channarayapatna Taluk and 3 Low speed *Rigs* in Holenarasipur and one in each of the taluks of Hassan and Belur. A sum of *Rs.* One lakh has been provided by the *Revenue* Department of Hassan District for taking up pit wells to provide drinking water *vide* G.O. No. RDN . TSY 75 dated 13-2-1975. 400 pit wells are programed for purposes of providing water to cattle in the entire Hassan District, out of which 75 pit wells have already been taken up in Hassan Taluk.

The allotment provided under drinking water wells programme to Hassan District to end of January 1975 is Rs. 9,63,000/-. Again in February 1975, an additional allotment of *Rs* 2,20,000 has been provided to this District out of which Rs. 1,59 000 has been given to Hassan Taluk. There will be no difficulty in giving further allotment in case of necessity and all efforts will be made to meet the situation. The Development Commissioner also visited this District recently and issued suitable instructions to the Deputy Commissioner for taking up remedial measure wherever necessary. The taluk-wise allotment and expenditure incurred under the

Drinking Water Wells Programme during the year 1974-75 (to end of January 1975) are furnished below :—

Sl. No.	Amount allotted to Dist.	Name of Taluk	Amount released to each Taluk	Expenditure incurred to end of Jany 1975	Balance
	Rs.		Rs.	Rs.	Rs.
1.	11,83,000	Arkalgud	2,05,000	1 25,000	80,000
2.		Arsikere	2,0 ,000	1,47,151	57,84
3.		Alur	72, 00	41,629	30,371
4.		Belur	1,41,000	1,10,690	30,310
5.		Channaraya-patna	2,13,000	1,52,185	60,815
6.		Hassan	1,59,000	1,16,611	42,389
7.		Holenarasipur	,08,000	81,376	26,624
8.		Sakleshpur	80,000	72,2 8	7,772
Total	11,83,000		11,83,000	8,46 870	3,36,1 0

So, we have taken all measures and allotted more money than required.

ಶ್ರೀ ಕೆ. ಎಚ್. ಹನುಮೇಗೌಡ.—ಅಧ್ಯಕ್ಷರೇ, ಅವರು ಕೊಟ್ಟಿರುವ ವರದಿ ಎರಡು ತಿಂಗಳ ಹಿಂದೆ ತಯಾರು ಮಾಡಿರುವುದು, ಅದು ನನ್ನ ಗಮನಕ್ಕೂ ಬಂದಿದೆ. ಆಗ 103 ಹಳ್ಳಿಗಳಲ್ಲಿ ತೊಂದರೆಯಿತ್ತು, ಎರಡು ತಿಂಗಳಿಂದೀಚೆಗೆ ಇನ್ನೂ ಕೆಲವು ಹಳ್ಳಿಗಳಲ್ಲಿ ತೊಂದರೆಯಾಗಿದೆ, ಈಗ 300 ಹಳ್ಳಿಗಳಲ್ಲಿ ನೀರಿಲ್ಲ, ಬಾವಿಗಳನ್ನು 110 ಅಡಿಗಳ ವರೆಗೆ ತೆಗೆದರೂ ನೀರು ದೊರಯುತ್ತಿಲ್ಲ. 58 ಬೋರ್‌ವೆಲ್‌ಗಳಲ್ಲಿ ಸುಮಾರು ಅರ್ಧ ಫೈಲ್ ಆಗಿವೆ. ಇದರಿಂದ ಹಣ ವ್ಯರ್ಥವಾಗಿದೆ. ಮುಖ್ಯಮಂತ್ರಿಗಳಿಗೂ ಮತ್ತು ಸಂಬಂಧಪಟ್ಟ ಮಂತ್ರಿಗಳಿಗೂ ಇದರ ಬಗ್ಗೆ ಕಾಗದ ಬರೆದೆ, ಅಲ್ಲಿಗೆ ಬಂದ ಅಧಿಕಾರಿಗಳನ್ನೆಲ್ಲಾ ಕರೆದುಕೊಂಡು ಹೋಗಿ ತೋರಿಸಿದೆ. ಎರಡು ಮೂರು ಮೈಲ್ ಹೋದರೂ ನೀರು ಸಿಕ್ಕುವುದಿಲ್ಲ, ಕೆರೆಗಳಲ್ಲೂ ನೀರಿಲ್ಲ. ಇದನ್ನು ಮಾನ್ಯ ರಾಜ್ಯಪಾಲರೂ ಸಹ ತಮ್ಮ ಭಾಷಣದಲ್ಲಿ ಒಪ್ಪಿಕೊಂಡಿದ್ದಾರೆ. ಇದು ಮಹತ್ವದ ವಿಷಯ. ದೇಶದ ರೈತರು ಬವರು ಸುರಿಸಿ ಕೊಟ್ಟಿರುವ ಹಣದಲ್ಲಿ 27 ರಿಗ್‌ಗಳನ್ನು ಕೊಂಡರು, ಅವು ಇರುವ ಜಾಗ

(ಶ್ರೀ ಕೆ. ಹಚ್. ಹನುಮೇಗೌಡ)

ದಲ್ಲೇ ಇವೆ. ಮೂರು ಜಿಲ್ಲೆಗಳಲ್ಲಿ ರಾಜ್ಯಪಾಲರು ತಿಳಿಸಿರುವಂತೆ ಕರಿಣ ಪರಿಸ್ಥಿತಿ ಯಿದ್ದರೂ ಕೂಡ ಸೂಕ್ತ ಕ್ರಮ ಕೈಗೊಂಡಿಲ್ಲ. ಇದಕ್ಕೆ ಕಾರಣವೇನು ? ಎರಡನೆಯದು 4 ರಿಗ್‌ಗಳನ್ನು ಕಳಿಸಿದರು, ಅವು 6 ತಿಂಗಳಾದರೂ ಒಂದು ಬೋರ್‌ವೆಲ್ ಮಾಡುವುದಿಲ್ಲ. ಇದಕ್ಕೆ ಸರಕಾರವೇ ಹೊಣೆ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಈ ವಿಚಾರದಲ್ಲಿ ಯಾವ ರೀತಿ ಹೇಳಬೇಕೋ ಗೊತ್ತಾಗುವುದಿಲ್ಲ.

ಈಗ ಕಳುಹಿಸಿರತಕ್ಕಂಥ ಲೋ ಸ್ಪೀಡ್ ರಿಗ್‌ಗಳು ೫ ತಿಂಗಳಿಗೋ ಒಂದು ವರ್ಷಕ್ಕೋ ಒಂದು ಹಾಕುವುದು. ಅಲ್ಲಿ ಅಷ್ಟು ಕಷ್ಟದ ಪರಿಸ್ಥಿತಿ ಇರುವಾಗ, ಮಾನ್ಯ ರಾಚಯ್ಯನವರು ಮಂತ್ರಿಗಳಾಗಿ ಬಂದ ಮೇಲಾದರೂ ಮಾಡಿಸಿಕೊಡುತ್ತಾರೆಂದು ಭಾವಿಸಿದ್ದರೆ, ಅವರು ಒಂದು ಭಾಗದ ಜನಕ್ಕೆ ಒಂದು ರೀತಿ ಇನ್ನೊಂದು ಭಾಗದ ಜನಕ್ಕೆ ಮತ್ತೊಂದು ತರಹ ಮಾಡಿದರೆ ದೇವರು ಅವರನ್ನು ಖಂಡಿತ ಮೆಚ್ಚುವುದಿಲ್ಲ. ಅಲ್ಲಿಯ ಹೆಣ್ಣುಮಕ್ಕಳು ಬಹಳ ಕಷ್ಟಪಡುತ್ತಿದ್ದಾರೆ. ಆದುದರಿಂದ ಇದರ ಬಗ್ಗೆ ಮಂತ್ರಿಗಳು ಖಚಿತವಾಗಿ ಭರವಸೆ ಕೊಡಬೇಕು ಇಲ್ಲದಿದ್ದರೆ ಅಲ್ಲಿಯವರೆಗೂ ನಾನು ಕುಳಿತುಕೊಳ್ಳುವುದಿಲ್ಲ

ಶ್ರೀ ಎನ್. ರಾಚಯ್ಯ.—ಮಾನ್ಯ ಹನುಮೇಗೌಡರವರಿಗೆ ಗೊತ್ತಿರುವ ಹಾಗೆ ನಾನು ಸುಮಾರು ಎರಡೂವರೆ ತಿಂಗಳ ಹಿಂದೆ ಅರಕಲಗೂಡು, ಚನ್ನರಾಯ ಪಟ್ಟಣ, ಮತ್ತು ಹಾಸನ ಮುಂತಾದ ತಾಲ್ಲೂಕ್‌ಗಳಲ್ಲಿ ಪ್ರವಾಸ ಮಾಡಲು ಹೋಗಿದ್ದಾಗ ಅಲ್ಲಿ ಯಾವ ಒಂದು ನೀರಿನ ಅಭಾವ ಪರಿಸ್ಥಿತಿ ಇದೆ ಎಂಬುದನ್ನು ಮನಗೊಂಡು ಅದಕ್ಕೆ ಸೂಕ್ತವಾದ ಕ್ರಮವನ್ನು ತೆಗೆದುಕೊಂಡು ಹಣವನ್ನು ಒದಗಿಸಿದ್ದೇವೆ. ಅಲ್ಲಿ ಯಾವ ಸ್ಪೀಡ್‌ನಲ್ಲಿ ಮಾಡಬೇಕೋ ಆ ಸ್ಪೀಡ್‌ನಲ್ಲಿ ಮಾಡಿಸುತ್ತೇವೆ. ಮಾನ್ಯ ಚನ್ನಬಸಪ್ಪನವರು ಅದನ್ನು ಆದಷ್ಟು ಜಾಗ್ರತೆ ಒದಗಿಸಿ ಕೊಡಬೇಕೆಂದು ನಾನು ಕೂಡ ಒತ್ತಾಯ ಮಾಡುತ್ತೇನೆ. ಮಾನ್ಯ ಹನುಮೇಗೌಡರವರ ತಾಲ್ಲೂಕಿನಲ್ಲಿ ಮಾಡಿರುವಂಥ ಕೆಲಸ ಬೇರೆ ಯಾವ ತಾಲ್ಲೂಕಿನಲ್ಲಿಯೂ ಮಾಡಿಲ್ಲ. ಆದುದರಿಂದ ತಾವು ಆ ವಿಷಯದ ಬಗ್ಗೆ ಅನುಮಾನ ಪಡಬೇಕಾದ್ದು ಇಲ್ಲ. ನೀವು ಕೊಟ್ಟಿರತಕ್ಕಂಥ ರೆಪ್ರಜಿಂಟೇಷನ್ನಿಗೆ ಬೆಲೆ ಇದೆ. ಈಗ ಒತ್ತಾಯ ಮಾಡಿ ಎಲ್ಲಾ ಕೆಲಸಗಳನ್ನು ಅಲ್ಲಿ ವ್ಯಾಪಿಸುತ್ತಿದ್ದೇವೆ ಇನ್ನು ತೀವ್ರವಾಗಿ ನಿಮ್ಮ ಏರಿಯಾದಲ್ಲಿ ವ್ಯಾಪಿಸಬೇಕೆಂದು ನಮ್ಮ ಗಮನಕ್ಕೆ ತಂದಿರುವುದರಿಂದ ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ಹೆಚ್. ಹನುಮೇಗೌಡ.—ಅಲ್ಲಿಯ ಜನ ಬಹಳ ನೊಂದಿದ್ದಾರೆ. ನಾಳೆ ನಾನು ಊರಿಗೆ ಹೋಗಬೇಕು. ಹೋದರೆ ಅಲ್ಲಿ ಮನೆಯ ಹತ್ತಿರ ಬಂದು ಗಲಾಟೆ ಮಾಡುತ್ತಾರೆ. ನಮ್ಮ ಮನೆಯಲ್ಲಿಯೂ ನೀರಿಲ್ಲ ಬಿಡಿ, ಅದು ಪರವಾಗಿಲ್ಲ ಹೇಗೋ ಮಾಡಿಕೊಳ್ಳುತ್ತೇವೆ. ಆದರೆ ಬೇರೆಯವರಿಗೆ 3 ಕೊಡ ನೀರು ಸಿಕ್ಕುವುದಿಲ್ಲ ಬಹಳ ತೊಂದರೆಯಾಗಿದೆ. ಈಗ ಡೀಪನಿಂಗ್‌ಗೆ ದುಡ್ಡು ಕೊಟ್ಟಿದ್ದೇವೆಂದು ಹೇಳಿದಿರಿ ಅದು ಏನೋ ಸರಿ. ಆದರೆ ಈಗ ಅಲ್ಲಿಗೆ ಹೈಸ್ಪೀಡ್ ರಿಗ್ ಮಿಷನ್ ಅಲ್ಲಿಗೆ ಬೇಗನೆ ಕಳುಹಿಸಿಕೊಡಿ. ಅದನ್ನು ಕಳುಹಿಸಿಕೊಟ್ಟರೆ ಅಲ್ಲಿ 150–175 ಅಡಿ ತೋಡಬಹುದು.

ಶ್ರೀ ಎನ್. ರಾಚಯ್ಯ.— 13-2-1975ರಲ್ಲಿ ಒಂದು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ 400 ಪಿಟ್ ವೆಲ್ಸ್‌ಗಳು ಈಗಾಗಲೇ ಆಗಿದೆ ಬಹಳ ತೀವ್ರವಾದಂಥ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇವೆ. ಈ ಪಿಟ್‌ವೆಲ್ಸ್‌ನಿಂದ ದನಕರುಗಳಿಗೂ, ಜನಗಳಿಗೂ ಅನುಕೂಲವಾಗಲಿ ಎನ್ನತಕ್ಕಂಥ ದೃಷ್ಟಿಯಿಂದ ಸೂಕ್ತವಾದಂಥ ಕಾರ್ಯ ಕ್ರಮವನ್ನು ತಮ್ಮ ಅಕಾಂಕ್ಷೆಯಂತೆ ತೆಗೆದು ಕೊಂಡಿದ್ದೇವೆ.

ಶ್ರೀ ಹೆಚ್. ಡಿ. ದೇವೇಗೌಡ.—ಇದರ ಬಗ್ಗೆ ನೀವು ಏನು ದುಡ್ಡು ಕೊಟ್ಟಿದ್ದೀರಿ, ಇಲ್ಲಿ ಹಣದ ಪ್ರಶ್ನೆಯಲ್ಲ–ಅಲ್ಲಿಗೆ ಲೋ ಸ್ಪೀಡ್ ರಿಗ್ ಮಿಷನ್‌ಗಳನ್ನು ಕಳುಹಿಸಿದ್ದೀರಿ, ಇದರಿಂದ 15, 20 ಅಲ್ಲ ಒಂದು ತಿಂಗಳಾದರೂ ಅಲ್ಲಿ ಕೆಲಸ ಬೇಗನೆ ಆಗುವುದಿಲ್ಲ ಆದುದರಿಂದ ದಯಮಾಡಿ ಗುಲ್ಬರ್ಗಕ್ಕೆ 17-27 ಹೈಸ್ಪೀಡ್ ರಿಗ್ ಮಿಷನ್‌ಗಳನ್ನು ಕೊಟ್ಟಿದ್ದೀರೋ ಅದರಲ್ಲಿ ಕೆಲವು ಮಿಷನ್‌ಗಳನ್ನು ತರಿಸಿ ಪ್ರತಿಯೊಂದು ಜಿಲ್ಲೆಗೂ ಕಳುಹಿಸಿದರೆ ಈ ಸಮಸ್ಯೆ ಆದಷ್ಟು ಬೇಗನೆ ಪರಿಹಾರ ಆಗುತ್ತದೆ.

SRI H. M. CHANNABASAPPA.—Madam Speaker, Sir, the Divisional Commissioner reported that Hassan and a couple of other districts round about have been suffering from acute shortage of water and that two rig wells must be immediately despatched, even at the cost of other places. We did despatch. I shall look into the matter, and see if high speed rigs are available near about. We will see that something is done to give relief to water scarcity areas in Hassan District and also in other districts where there is acute water scarcity. We will certainly see to it.